ಸಂಪಣವನ್ನು ಸೌಟಿನಿಂದ ತಿರುವುತ್ತಾ ಹದಗೊಳಿಸುತ್ತಿದ್ದರು ವಿಲಿಯಂ ಪರೇರಾ. ಸ್ವತಃ ಸೂಸನ್ ಕೇರಳದವರಾದರೂ ಆಪಂ–ಸ್ಟ್ಯೂ ಮಾಡಲು ಅಷ್ಟೇನು ಕೈ ಪಳಗಿರಲಿಲ್ಲ ಅವರಿಗೆ. ಅದೇನಿದ್ದರೂ ಪಪ್ಪನೇ ಸರಿ ಎನ್ನುತ್ತಾಳೆ ಮಗಳು ರೋಸ್. ಮಗಳು ಬೆನ್ನಹಿಂದೆ ಬಂದಿದ್ದು ಗೊತ್ತಾಗುತ್ತಲೇ ತಿರುಗಿ ಅವಳನ್ನಪ್ಪಿ, 'ಹ್ಯಾಪಿ ಬರ್ತ್‌ಡೇ ಡಾರ್ಲಿಂಗ್' ಎಂದ ವಿಲಿಯಂಗೆ, 'ಥ್ಯಾಂಕ್ಯು ಪಪ್ಪ' ಎಂಬ ಮರುನಗೆ ಸೂಸಿ, ಕತ್ತು ಚಾಚಿ ಒಲೆಯ ಮೇಲಿದ್ದ ಪಾತ್ರೆಯತ್ತ ಬಾಗಿ, 'ವಾವ್... ಸೆನ್ಸೇಶನಲ್' ಎನ್ನುತ್ತಾ ಮೆಚ್ಚಿಕೊಂಡ ಮಗಳನ್ನು. 'ಕಮಾನ್ ಡಿಯರ್, ವಾಟ್ ಡುಯು ವಾಂಟ್ ಫಾರ್ ದಿಸ್ ಬರ್ತ್‌ಡೇ' ಎಂದ ತಂದೆಗೆ, 'ಸದ್ಯಕ್ಕೆ ಏನೂ ಬೇಕಿಲ್ಲ. ಬೇಕಾದ್ರೆ ಕೇಳ್ತೀನಿ ಪಪ್ಪ' ಎಂದಳು. ನಾಜೂಕಾಗಿ ಎಬ್ಬುತ್ತಾ ಬಿಳಿಯ ಲೇಸಿನ ವಸ್ತ್ರದಂತಿದ್ದ ದೋಸೆಯನ್ನು ತಾಟಿಗೆ ಹಾಕುತ್ತಲೇ, ನಡುವೆ ಓವನ್ನಿನ ಬಾಗಿಲನ್ನು ಕೈಗವಸಿನಿಂದ ತೆರೆದು, ಟ್ರೇಯನ್ನೆಳೆದುಕೊಂಡು ಕಡ್ಡಿಯಿಂದ ಕೇಕನ್ನೊಮ್ಮೆ ಚುಚ್ಚಿ ನೋಡಿ ತೃಪ್ತಿಯಿಂದ ಬೆಂದಿದೆ ಎಂದು, ಮೆಲ್ಲನೆ ಉಬ್ಬಿ ಘಮಗುಡುತ್ತಿದ್ದ ಗುಂಡನೆ ಕೇಕನ್ನು ಡೈನಿಂಗ್ ಟೇಬಲ್ಲಿನ ಮೇಲಿಟ್ಟಳು ಸೂಸನ್. ಅಪ್ಪನಿಗೆ ಹುರುಪು ಹೆಚ್ಚಾಗಿ, 'ಕಮಾನ್ ಬೇಬಿ ಕಟ್ ದ ಕೇಕ್' ಎನ್ನುತ್ತಾ ಅಲ್ಲೇ ಇದ್ದ ಕ್ಯಾಂಡಲನ್ನು ತರಹೋದಾಗ ತಡೆತಡೆದು, 'ಅದು ಪಪ್ಪಾ... ಇನ್ನು ಸ್ವಲ್ಪ ಹೊತ್ತಾಗ್ಲಿ ಮೂರ್ತಿ ಮೇಸೇಜ್ ಮಾಡಿದಾನೆ. ಅವನು ಈಗ ಇನ್ನೊಂದರ್ಧ ಗಂಟೇಲಿ ಬರ್ತಿದಾನೆ' ಅಂದಳು. ಅಚ್ಚರಿಯಿಂದ ಅಪ್ಪ ಹುಬ್ಬೇರಿಸಿ, 'ಯಾರು? ಕೃಷ್ಣಮೂರ್ತಿನ?' ಎಂದು ಕೇಳಿದರು. ಸೂಸನಮ್ಮ ಮಾತ್ರ ತುಸು ಅಸಹನೆ ಅಸಮಾಧಾನದಿಂದ, 'ಯಾಕಂತೆ? ಪ್ರತಿ ವರ್ಷಾನು ನಿನ್ನ ಬರ್ತ್‌ಡೇಗೆ ಬರಕ್ಕೆ ಏನಿರುತ್ತೆ ಅವನ್ಗೆ' ಅಂತ ಗೊಣಗಿದಾಗ ರೋಸ್, 'ನಾನೇನ್ಮಾಡ್ಲಿ ಮಮ್ಮ? ಬರ್ತೀನಂದ್ರೆ ಬೇಡ ಅನ್ನಲ?' ಎಂದು ಸಿಡುಕಿದಾಗ, 'ಸರಿ ಸರಿ ಈಗ ಟೀ ಮಾಡ್ಲಾ?' ಎನ್ನುತ್ತಾ ಅಲ್ಲೆದ್ದ ಅಸಹನೆಯ ಅಲೆಗೆ ಮುಕ್ತಾಯ ಹಾಡಲೆತ್ನಿಸಿದಳು. 'ಈಗ ಬೇಡ ಮಮ್ಮ... ಅವನೂ ಬರ್಩ಿ; ಅವನ ಜೊತೇನೇ ಟೀ ಕುಡೀತೀನಿ' ಅಂದಾಗ ತನಗಾದ ಅಸಂತೋಷವನ್ನು ಒಂದಿಷ್ಟೂ ಮುಚ್ಚಿಟ್ಟುಕೊಳ್ಳದೆ ಮುಖದಲ್ಲಿ ತೋರಿಸುತ್ತಾ ಅಡಿಗೆ ಮನೆಯತ್ತ ಮುಖ ಮಾಡಿದಳು ಸೂಸನ್.

ಡೈನಿಂಗ್ ಟೇಬಲಿನ ಮೇಲಿನ ತಾಟುಗಳನ್ನೆತ್ತಿ ಯುಟಿಲಿಟಿಯ ಸಿಂಕಿಗೆ ಹಾಕಿ ಕೈತೊಳೆದು, ಅಲ್ಲೇ ಟೇಬಲಿನ ಮೇಲೆ ಇದ್ದ ಕರವಸ್ತ್ರದಲ್ಲಿ ಕೈಯೊರಸಿಕೊಳ್ಳುತ್ತಾ, 'ಪಪ್ಪಾ, ನಾನು ಶವರ್ ಮಾಡಿ ರೆಡಿಯಾಗಿ ಬರ್ತೀನಿ. ಮೂರ್ತಿ ಬಂದ್ರೆ ಮಾತಾಡಿಸ್ತಾ ಇರು' ಅಂತ ಚಿಗರೆಯಂತೆ ಹಾರಿದ ಮಗಳನ್ನು ಮುದ್ದಿನಿಂದ ನೋಡಿ ಮುಗುಳ್ನಕ್ಕರು ವಿಲಿಯಂ. ರೋಸ್ ಸ್ನಾನ, ವೇಷಭೂಷಣಗಳನ್ನು ಮುಗಿಸಿ ಕೆಳಗಿಳಿಯುವ ವೇಳೆಗೆ ಆಗಲೇ ಮೂರ್ತಿ ಹಾಲಿನ ಸೋಫಾದಲ್ಲಿ ಕೂತು ಮಾತಾಡುತ್ತಿದ್ದ. ಅವನ ಮುಂದಿರುವ ಟೀಪಾಯಿ ಮೇಲೆ ದೊಡ್ಡದೊಂದು ಗುಲಾಬಿ ಹೂವುಗಳ ಬೊಕೆ, ಪೇಸ್ಟ್ರಿಯ ರಟ್ಟಿನ ಪೆಟ್ಟಿಗೆಯೊಂದು ರಾರಾಜಿಸುತ್ತಿತ್ತು. ರೋಸ್ ಮುಖದಲ್ಲಿ ತೆಳುವಾದ ನಗೆಯ ಸೆಲೆಯೊಂದು ಹರಿದಾಡುತ್ತಲೇ, 'ಹಲೋ ಮೂರ್ತಿ... ಅಂತೂ ನೀನು ನನ್ನ ಬರ್ತ್‌ಡೇಗೆ ಮೈಸೂರಿನ ಪೇಸ್ಟ್ರಿ ತಪ್ಪಿಸಲ್ಲ ಅಲ್ಲ...' ಎಂದು ನಗುತ್ತಾ ಅವನ ಕೈ ಕುಲುಕಿ ಅವನ ಪಕ್ಕದಲ್ಲೇ ಕೂತಳು.

ಸೂಸನಮ್ಮ ಮಾಡಿದ ಕೇಕಿನ ಪಕ್ಕದಲ್ಲಿಟ್ಟ ತೆಳು ಹಳದಿ ಪೇಸ್ಟ್ರಿಯನ್ನು, ಅದರ ಮೇಲಿದ್ದ ಬಿಳಿ ಐಸಿಂಗ್‌ನ ಆಕರ್ಷಕ ಅಕ್ಷರಗಳಲ್ಲಿ ಬರೆದ, 'ಹ್ಯಾಪಿ ಬರ್ತ್‌ಡೇ ರೋಸ್' ಎನ್ನುವುದನ್ನು ನೋಡಿದಾಗ ಅವಳ ಮುಖದ ತುಂಬ ಮುಗುಳ್ನಗೆಯೊಂದು ಹರಡಿತು. ಚಾಕುವನ್ನು ಕೈಗೆತ್ತಿಕೊಂಡು ಕ್ಯಾಂಡಲನ್ನಾರಿಸಿ ಕೇಕ್ ಕತ್ತರಿಸಿದವಳನ್ನು ಒಂದರೆಕ್ಷಣ ತದೇಕವಾಗಿ ನೋಡಿದ ಮೂರ್ತಿ ತಕ್ಷಣ ಕಣ್ಣು ಹೊರಳಿಸಿ ಅವಳಿಗೆ ವಿಶ್ ಮಾಡಿ, ವಾಡಿಕೆಯಂತೆ ಪೇಸ್ಟ್ರಿಯ ತುಣುಕೊಂದನ್ನು ಮುರಿದು ಅವಳ ಬಾಯಿಗೆ ಗಿಡಿದು ಟಿಶ್ಯೂ ಪೇಪರ್‌ನಲ್ಲಿ ಕೈಯೊರಸಿಕೊಳ್ಳುತ್ತಾ ನಿಂತ. ಅವನ ಮುಖದಲ್ಲಿದ್ದ ಧನ್ಯತೆಯನ್ನು ಕಂಡು ಬೆರಗಿಗೊಳಗಾದವಳಂತೆ ನಿಂತ ರೋಸ್ ಕೂಡಲೆ ಸಾವರಿಸಿಕೊಂಡು, 'ಮೂರ್ತಿ